**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊನ್ನಾವರ**

**ಫೌಜುದಾರಿ ಪ್ರಕರಣ ಸಂಖ್ಯೆ : 89/2020**

**ಚಾ.ಸಾಃ 19, ಫ್ರಾ.ಸಾಃ 10**

| | |
|---|---|
| ಸಾಕ್ಷಿದಾರನ ಹೆಸರು | ಕೃಷ್ಣ ಗೌಡ |
| ತಂದೆಯ ಹೆಸರು | ದೇವು ಗೌಡ |
| ವಯಸ್ಸು | 48 ವರ್ಷ |
| ಉದ್ಯೋಗ | ಮುಖ್ಯಪೇದೆ, ಡಿವಾಯ್ ಎಸ್ ಪಿ ಕಚೇರಿ, ಭಟ್ಕಳ |
| ವಾಸ್ತವ್ಯ | ಭಟ್ಕಳ |

**ಸಾಕ್ಷಿಯನ್ನು ದಿನಾಂಕಃ 24-10-2024 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎಪಿಪಿಯವರಿಂದ,**

ದಿನಾಂಕ 18-01-2017 ರಿಂದ 18-06-2023 ರ ವರೆಗೆ ಹೊನ್ನಾವರ ಠಾಣೆಯಲ್ಲಿ ಮುಖ್ಯಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 31-07-2020 ರಂದು ಚಾಸಾ-23 ರವರು ನನ್ನನ್ನು ಮತ್ತು ಚಾಸಾ-17 ಮತ್ತು 18 ರವರನ್ನು ಸರಕಾರಿ ವಾಹನದಲ್ಲಿ ಚಂದಾವರ ಕಡೆಗೆ ಗಸ್ತು ಮತ್ತು ಎಂ.ವಿ. ಆ್ಯಕ್ಟ ಪ್ರಕರಣ ದಾಖಲಿಸಲು ಕರೆದುಕೊಂಡು ಹೋಗಿದ್ದರು. ಈ ರೀತಿ ಹೋಗುತ್ತಿರಬೇಕಾದರೆ ಸಂಜೆ 05-00 ಗಂಟೆ ವೇಳೆಗೆ ಎಂವಿ ಪ್ರಕರಣಗಳನ್ನು ದಾಖಲು ಮಾಡುತ್ತಿದ್ದಾಗ ಒಂದುಪಲ್ಸರ್ ಮೇಲೆ 2 ಜನ ಬರುತ್ತಿದ್ದು ಚಾಸಾ-23 ರವರು ಬೈಕನ್ನು ನಿಲ್ಲಿಸುವಂತೆ ನನಗೆ ಸೂಚಿಸಿದ್ದು ನಾನು ಸದರಿ ಬೈಕನ್ನು ನಿಲ್ಲಿಸಿ ಬೈಕಿನಲ್ಲಿದ್ದವರನ್ನು ಚಾಸಾ-23 ರವರು ವಿಚಾರಿಸಿದಾಗ ಬೈಕಿಗೆ ಸಂಬಂಧಪಟ್ಟಂತೆ ಯಾವುದೇ ದಾಖಲೆಗಳನ್ನು ಹಾಜರುಪಡಿಸದೇ ಗಾಬರಿಗೊಂಡಿರುತ್ತಾರೆ. ಚಂದಾವರದ ಸುತ್ತಮುತ್ತ ಸಾಕಷ್ಟು ಮನೆಗಳಲ್ಲಿ ಕಳ್ಳತನವಾಗುತ್ತಿದ್ದರಿಂದ ಅವರ ನಡವಳಿಕೆ ಅನುಮಾನಾಸ್ಪದವಾಗಿದ್ದರಿಂದ ಅವರನ್ನು ವಿಚಾರಿಸಲು ಠಾಣೆಗೆ ಕರೆದುಕೊಂಡು ಬಂದಿರುತ್ತಾರೆ. ಸದರಿಯವರನ್ನು ವಿಚಾರಿಸಿದಾಗ ಅವರು ಚಂದಾವರ, ಬಾದಳ್ಳಿ, ಜಡ್ಡಿಗದ್ದೆ, ಹೆಬ್ಬಾರ್ನಕೆರೆ, ಕೆಕ್ಕಾರ ಕ್ರಾಸ್, ಹೂವಿನ ಹಿತ್ಲು ಮತ್ತು ಇತರೇ ಸಾಕಷ್ಟು ಮನೆಗಳಲ್ಲಿ ಕಳ್ಳತನ ಮಾಡಿರುವುದಾಗಿ ಸ್ವ ಖುಷಿ ಹೇಳಿಕೆ ನೀಡಿರುತ್ತಾರೆ. ಚಾಸಾ-23 ರವರು ಸ್ವಖುಷಿ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ. ಆರೋಪಿತರು ಒಂದು ಕಾರು ಮತ್ತು ಬೈಕನ್ನು ಕೃತ್ಯಕ್ಕೆ ಬಳಸಿದ್ದು ಸದರಿ ಕಾರನ್ನು ಮನೆಯ ಹತ್ತಿರ ನಿಲ್ಲಿಸಿರುವುದಾಗಿ ಸ್ವಖುಷಿ ಹೇಳಿಕೆಯಲ್ಲಿ ತಿಳಿಸಿರುತ್ತಾರೆ. ಅದರಂತೆ ಚಾಸಾ-23 ರವರು ನನ್ನನ್ನು ಆರೋಪಿಯ ಮನೆಯ ಹತ್ತಿರ ಕರೆದುಕೊಂಡು ಹೋಗಿದ್ದು ಪಂಚರ ಸಮಕ್ಷಮ ಆರೋಪಿತರು ಮನೆಯ ಹತ್ತಿರ ನಿಲ್ಲಿಸಿದ್ದ ಒಂದು ಕಾರು ಮತ್ತು ಕಾರಿನಲ್ಲಿದ್ದಂತಹ 2 ಕಬ್ಬಿಣದ ರಾಡ್‌ಗಳನ್ನು ಹಾಗೂ ಮನೆಯಲ್ಲಿ ಜಡ್ಡಿಗದ್ದೆಯಲ್ಲಿ ಕಳ್ಳತನ ಮಾಡಿಕೊಂಡಿದ್ದ ಒಂದು ಬಂಗಾರದ ಮೂಗುತಿಯನ್ನು ಮನೆಯ ಒಳಗಿಂದ ತಂದು ಹಾಜರುಪಡಿಸಿರುತ್ತಾರೆ. ನಂತರ ಚಾಸಾ-23 ರವರು ಕಾರನ್ನು, ಕಬ್ಬಿಣದ ರಾಡನ್ನು ಮತ್ತು ಆರೋಪಿತರು ಹಾಜರುಪಡಿಸಿದ ಮೂಗುತಿಯನ್ನು ಪಂಚರ ಸಮಕ್ಷಮ

ಅಮಾನತ್ತುಪಡಿಸಿಕೊಂಡಿರುತ್ತಾರೆ. ನಂತರ ಚಾಸಾ-23 ರವರು ಆರೋಪಿತರನ್ನು ಠಾಣೆಗೆ ಕರೆದುಕೊಂಡು ಬಂದಿದ್ದು ಮರುದಿನ ಆರೋಪಿತರು ಕೃತ್ಯಕ್ಕೆ ಬಳಸಿದ್ದ ಬೈಕ್ ಪೋಲೀಸ್ ಠಾಣಾ ಆವರಣದಲ್ಲಿ ನಿಲ್ಲಿಸಿದ್ದು ಪಂಚರ ಸಮಕ್ಷಮ ಸದರಿ ಬೈಕನ್ನೂ ಸಹ ಪಂಚನಾಮೆಯಡಿಯಲ್ಲಿ ಅಮಾನತ್ತುಪಡಿಸಿಕೊಳ್ಳಲಾಯಿತು.

ಆರೋಪಿತರು ಕಳುವು ಮಾಡಿರುವ ಒಡವೆಗಳನ್ನು ಕುಮಟಾದ ಮಣಪುರಂ ಫೈನಾನ್ಸ ಮತ್ತು ಮಣಪುರಂ ಬ್ಯಾಂಕನಲ್ಲಿ ಗಿರವಿ ಇಟ್ಟಿರುವುದಾಗಿ ತಮ್ಮ ಹೇಳಿಕೆಯಲ್ಲಿ ತಿಳಿಸಿದ್ದು ಅದರಂತೆ ಚಾಸಾ-23 ರವರು ನನ್ನನ್ನು ಮತ್ತು ಸಿಬ್ಬಂದಿ ಹಾಗೂ ಪಂಚರನ್ನು ಕುಮಟಾದ ಮಣಪುರಂ ಫೈನಾನ್ಸಗೆ ಕರೆದುಕೊಂಡು ಹೋಗಿದ್ದು ಅಲ್ಲಿ ವಿಚಾರಿಸಿದಾಗ ಮಣಪುರಂ ಫೈನಾನ್ಸನವರು ಆರೋಪಿತರು ಕಳುವು ಮಾಡಿದ ಆಭರಣಗಳನ್ನು ಗಿರವಿ ಇಟ್ಟಿರುವುದಾಗಿ ಒಪ್ಪಿಕೊಂಡಿದ್ದು ಆರೋಪಿತರು ಗಿರವಿ ಇಟ್ಟಿದ್ದ ಒಡವೆಗಳನ್ನು ಹಾಜರುಪಡಿಸಿರುತ್ತಾರೆ. ನಂತರ ಅವುಗಳನ್ನು ಪಂಚರ ಸಮಕ್ಷಮ ಪಂಚನಾಮೆಯಲ್ಲಿ ಅಮಾನತ್ತುಪಡಿಸಿಕೊಳ್ಳಲಾಯಿತು. ನಂತರ ಮುದ್ದೆಮಾಲುಗಳೊಂದಿಗೆ ಆರೋಪಿತರನ್ನು ಕರೆದುಕೊಂಡು ಹೊನ್ನಾವರ ಠಾಣೆಗೆ ಬಂದು ರಿಮಾಂಡ್ ಅರ್ಜಿಯೊಂದಿಗೆ ಆರೋಪಿತರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತಾರೆ.

ದಿನಾಂಕ 04-08-2020 ರಂದು ಪುನಃ ಆರೋಪಿತರನ್ನು ನ್ಯಾಯಾಂಗ ಬಂಧನದಿಂದ ಚಾಸಾ-23 ರವರು ಪೋಲೀಸ್ ಕಸ್ಟಡಿಗೆ ಪಡೆದುಕೊಂಡಿರುತ್ತಾರೆ. ನಂತರ ಆರೋಪಿತರು ತಮ್ಮ ಸ್ವ ಇಚ್ಛಾ ಹೇಳಿಕೆಯಲ್ಲಿ ಯಾವ ಮನೆಯಲ್ಲಿ ಕಳ್ಳತನ ಮಾಡಿದ್ದೆವೋ ಆ ಮನೆಗಳನ್ನು ತೋರಿಸುವುದಾಗಿ ಹೇಳಿಕೆ ನೀಡಿದ್ದು ಅದರಂತೆ ಚಾಸಾ-23 ರವರು ಆರೋಪಿತರು ಕರೆದುಕೊಂಡು ಹೋದ ಮನೆಗಳಿಗೆ ಭೇಟಿ ನೀಡಿ ಪಂಚನಾಮೆ ತಯಾರಿಸಿರುತ್ತಾರೆ. ಆ ದಿನ ನಾವು ಹಿಡಿದ ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದ ಮುಂದಿರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ. ಪಂಚನಾಮೆಯಡಿಯಲ್ಲಿ ಅಮಾನತ್ತುಪಡಿಸಿಕೊಂಡ ಕಬ್ಬಿಣದ ರಾಡಗಳನ್ನು, ಕಾರು ಮತ್ತು ಬೈಕನ್ನು ನೋಡಿದರೆ ಗುರುತಿಸುತ್ತೇನೆ. ಈ ಬಗ್ಗೆ ತನಿಖಾಧಿಕಾರಿಯವರ ಮುಂದೆ ಹೇಳಿಕೆ ನೀಡಿರುತ್ತೇನೆ.

**ಪಾಟೀ ಸವಾಲುಃ ಆರೋಪಿಗಳ ಪರ ವಕೀಲರಾದ ಶ್ರೀ ವಿ.ಎಂ. ಭಂಡಾರಿಯವರಿಂದಃ**

ಜಡ್ಡಿಗದ್ದೆ ಕ್ರಾಸ್‌ಗೆ ಹೋಗಲು 3 ಕಡೆ ದಾರಿ ಇದೆ ಎಂದರೆ ಸರಿ. ಯಾವ ರಸ್ತೆಯ ಮುಖಾಂತರ ಹೋಗಿದ್ದೆವು ನೆನಪಿಲ್ಲ. ಬೈಕನ್ನು ಆರೋಪಿತರ ಪೈಕಿ ಯಾರು ಚಲಾಯಿಸುತ್ತಿದ್ದರು ನೆನಪಿಲ್ಲ. ಜಡ್ಡಿಗದ್ದೆ ಕ್ರಾಸನಿಂದ ಹೊನ್ನಾವರ ಪೋಲೀಸ್ ಠಾಣೆ ಸುಮಾರು 20 ಕಿಲೋಮೀಟರ್ ಆಗಬಹುದು. ಚಾಸಾ-23 ರವರನ್ನು ಆರೋಪಿತರನ್ನು ಹಿಡಿದು ವಿಚಾರಿಸುವ ಕಾಲಕ್ಕೆ ಸ್ಥಳದಲ್ಲಿ ಯಾರೂ ಜನರು ಇರಲಿಲ್ಲ. ಜಡ್ಡಿಗದ್ದೆಯಿಂದ ಆರೋಪಿತರ ಬೈಕನ್ನು ಹೊನ್ನಾವರಕ್ಕೆ ಯಾರು ತೆಗೆದುಕೊಂಡು ಬಂದಿರುತ್ತಾರೆ ಎನ್ನುವುದು ನೆನಪಿಲ್ಲ. ಆರೋಪಿತರನ್ನು ಹಿಡಿದ ದಿನವೇ ಬೈಕನ್ನು ಪೋಲೀಸ್ ಠಾಣೆಗೆ ತರಲಾಗಿತ್ತು. ಆರೋಪಿತರನ್ನು ಮುಂದಿನ ವಿಚಾರಣೆಗೆ ಜೀಪಿನಲ್ಲಿ ಕರೆದುಕೊಂಡು ಹೋಗಲಾಗಿರುತ್ತದೆ. ಎಷ್ಟು ಜನ

ಹೋಗಿದ್ದೇವೆ ಎನ್ನುವುದು ನೆನಪಿಲ್ಲ. ಚಂದಾವರ ಮುಖ್ಯ ರಸ್ತೆಯಿಂದ ಪೂರ್ವಕ್ಕೆ ಆರೋಪಿತರ ಮನೆ ಇದೆ. ಆರೋಪಿತರ ಮನೆಯ ಅಕ್ಕಪಕ್ಕ ಬೇರೆಯವರ ಮನೆಗಳು ಇವೆ. ಆರೋಪಿತರ ಮನೆಗೆ ಹೋಗುವಾಗ ಪಂಚರನ್ನು ಹೊನ್ನಾವರದಿಂದಲೇ ಕರೆದುಕೊಂಡು ಹೋಗಲಾಗಿತ್ತು. ಆರೋಪಿತರ ಸ್ವ ಖುಷಿ ಹೇಳಿಕೆ ಪಡೆದುಕೊಳ್ಳುವಾಗ ಸಾರ್ವಜನಿಕರ ಇರಲಿಲ್ಲ. ರಾಡಗಳನ್ನು ಆರೋಪಿತರ ಕಾರಿನಲ್ಲಿ ಅಮಾನತ್ತುಪಡಿಸಿಕೊಳ್ಳಲಾಗಿರುತ್ತದೆ. ಸದರಿ ರಾಡಗಳಿಗೆ ಪಂಚರ ಸಹಿ ಇರುವ ಚೀಟಿ ಅಂಟಿಸಲಾಗಿತ್ತೋ ನೆನಪಿಲ್ಲ. ಕಬ್ಬಿಣದ ರಾಡ್‌ಗಳು ಸಾಮಾನ್ಯವಾಗಿ ಮೆಕ್ಯಾನಿಕ್ ಅಂಗಡಿಯಲ್ಲಿ ಸಿಗುತ್ತವೆ ಎಂದರೆ ಸರಿ. ಆರೋಪಿತರ ಮನೆಯ ಹತ್ತಿರ ಸುಮಾರು ಅರ್ಧ ಗಂಟೆಗಳ ಕಾಲ ತನಿಖೆ ಮಾಡಲಾಗಿರುತ್ತದೆ. ಪಂಚನಾಮೆಯನ್ನು ಬೆಳಕು ಇದ್ದಾಗ ಬರೆಯಲಾಗಿತ್ತೋ ಕತ್ತಲಾದಾಗ ಬರೆಯಲಾಗಿತ್ತೋ ನೆನಪಿಲ್ಲ. ಪಂಚನಾಮೆಯ ಕಾಲಕ್ಕೆ ಸುಮಾರು ಜನ ಇದ್ದರು. ನಿಖರವಾಗಿ ಎಷ್ಟು ಜನ ಇದ್ದರು, ಅವರು ಯಾರು ಗೊತ್ತಿಲ್ಲ. ಆರೋಪಿತರ ಪೈಕಿ ಮನೆಯಿಂದ ಬಂಗಾರದ ಮೂಗುತಿಯನ್ನು ಯಾರು ತಂದು ಕೊಟ್ಟಿರುತ್ತಾರೆ ನೆನಪಿಲ್ಲ.

ಕುಮಟಾದಲ್ಲಿ ದೀನಬಂಧು ಮುದ್ರಣಾಲಯದ ಸರ್ಕಲ್‌ನಲ್ಲಿ 5 ರಸ್ತೆಗಳು ಸೇರುತ್ತವೆ ಎಂದರೆ ಸರಿ. ಪೈನಾನ್ಸ ಹಳೆ ಬಸ್ ಸ್ಟಾಂಡ್ ರಸ್ತೆಯಲ್ಲಿದೆ. ಫೈನಾನ್ಸನಲ್ಲಿ ಸಿಸಿ ಕ್ಯಾಮರಾ ಇದೆ ಎಂದರೆ ಇರಬಹುದು. ಮಣಪುರಂ ಪೈನನ್ಸನಲ್ಲಿ ಎಷ್ಟು ಆಭರಣಗಳನ್ನು ಅಮಾನತ್ತುಪಡಿಸಿಕೊಳ್ಳಲಾಯಿತು ಮಾಹಿತಿ ಇಲ್ಲ. ಮಣಪುರಂ ಫೈನಾನ್ಸನವರು ಯಾವುದಾದರೂ ದಾಖಲೆಗಳನ್ನು ತನಿಖಾಧಿಕಾರಿಯವರಿಗೆ ತೋರಿಸಿರಬಹುದು, ನಾವು ಆರೋಪಿತರ ಕಡೆಗೆ ಲಕ್ಷ್ಯವಹಿಸಿದ್ದೆವು ಎನ್ನುತ್ತಾರೆ. ಪೈನಾನ್ಸನಲ್ಲಿ ಸಿಸಿಕ್ಯಾಮರಾ ಇದೆ ಎಂದರೆ ಇರಬಹುದು. ನಾನು ಹೇಳಿರುವಂತೆ ಆರೋಪಿತರು ಜಡ್ಡಿಗದ್ದೆ ಕ್ರಾಸನಲ್ಲಿ ಸಿಕ್ಕಿರುವುದಿಲ್ಲ ಎಂದರೆ ಸರಿಯಲ್ಲ, ಆರೋಪಿತರು ಯಾವುದೇ ಸ್ವ ಖುಷಿ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ಆರೋಪಿತರನ್ನು ಕುಮಟಾಕ್ಕೆ ಕರೆದುಕೊಂಡು ಹೋಗಿಲ್ಲ ಎಂದರೆ ಸರಿಯಲ್ಲ. ಆರೋಪಿತರ ಮಾಹಿತಿಯಂತೆ ಯಾವುದೇ ಚಿನ್ನದ ಒಡವೆಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಮೇಲಾಧಿಕಾರಿಗಳ ನಿರ್ದೇಶನದಂತೆ ದೋಷಾರೋಪಣ ಪಟ್ಟಿಗೆ ಅನುಗುಣವಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪಂಚರನ್ನು ಹೊನ್ನಾವರದಿಂದ ಕರೆದುಕೊಂಡು ಹೋಗಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.                    **ಸಹಿ ಇದೆ.**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**